ತೆಗೀಬೇಕಂತ ಮಾಡಿಯೇನಪಾ?... ನಿನ್ನೇ ನಂಬಿಕೊಂಡು ಕುಂತಿರ್ತೀನಲ್ಲೋ, ಹಿಂಗ್ಯಾಕೆ ಮಾಡೀ? ನೋಡಿಕೊಂಡು ಎಚ್ಚರಾಗಿ ಓಡಿಸಾಕೆ ಬರಾಲ್ಲವೇನು?' ಅಂತ ನೋವಿನಿಂದ ಮುಖ ಕಿವುಚಿಕೊಂಡೇ ಕೇಳಿದ್ದಾರೆ.

ಸಿದ್ದೀಕನಿಗೆ ಸುಮ್ಮನಿರಲಾಗಿಲ್ಲ, 'ನಾನಾರ ಏನು ಮಾಡಲೀ ನೀವೆ ಹೇಳಿ ಸಾರ್... ಒಂದು ಮಾತಿಲ್ಲ, ಕತಿ ಇಲ್ಲ. ಎಲ್ಲೂ ಐದು ನಿಮಿಷ ನಿಲ್ಲಂಗಿಲ್ಲ. ಒಂದು ಚಾಯಿ ಕುಡಿಯಂಗಿಲ್ಲ. ಅಲ್ಲಾಡದಂಗ ಗಪ್ಪನೇ ಗೊಂಬಿ ಕೂತಂಗೆ ಕೂತು ಬೆಳಗಿನ ತನಕಾ ಗಾಡಿ ಚಲಾಯಿಸೋಕೆ ನನಗೂ ತ್ರಾಸ ಆಗ್ತದರೀ ಸಾರ್... ನಾನೂ ಮನುಷಾ ಅಲ್ಲೇನ್ರೀ ಮತ್ತ? ದೊಡ್ಡೋರು ಅನ್ನಿಸಿಕೊಂಡ ನೀವೂ ಸ್ವಲ್ಪ ತಿಳುಕೋಬೇಕರಿ ನಮ್ಮಂತೋರ ಕಷ್ಟಾ...' ಅಂತ ತನ್ನ ಸಮಸ್ಯೆಯನ್ನು ಆಂದೋಲನಕಾರೀ ಶೈಲಿಯಲ್ಲಿ ಬಿನ್ನವಿಸಿಕೊಂಡದ್ದು ಸಾಹೇಬರ ಮನಸ್ಸಿಗೆ ಈಟಿಯಂತೆ ನಾಟಿತು. ಮಾತ್ರವಲ್ಲದೆ ಮಲಗಿಕೊಂಡಿದ್ದ ಅವರ ಅಂತಃಕರಣವನ್ನು ಬಡಿದೆಬ್ಬಿಸಿತು. ಪರಿಣಾಮ ಸಿದ್ದೀಕನೆಡೆಗಿನ ಅವರ ಅನುಕಂಪ ದುಪ್ಪಟ್ಟಾಗಿ ಅಂದಿನಿಂದಲೇ ಅವನನ್ನು ಬಾಯಿ ತುಂಬಾ ಮಾತನಾಡಿಸತೊಡಗಿದರು. ರಾತ್ರಿ ವೇಳೆಯಲ್ಲಿ ಅವನನ್ನೆಲ್ಲಾದರೂ ಕರೆದುಕೊಂಡು ಹೋಗಬೇಕಾದಾಗ ಅವನ ಕಾಫಿ ಟೀ, ಸಿಗರೇಟು ಇತ್ಯಾದಿ ಅಗತ್ಯಗಳು ಕಾಲಕಾಲಕ್ಕೆ ಈಡೇರುವಂತೆ ನೋಡಿಕೊಳ್ಳತೊಡಗಿದರು. ಮುಖ್ಯವಾಗಿ ರಾತ್ರಿಗಸ್ತು ಇದ್ದ ದಿನದಂದು ಮುಂಚಿತವಾಗಿ ಅಂದರೆ ಮಧ್ಯಾಹ್ನವೇ ಅವನನ್ನು ಮನೆಗೆ ಕಳಿಸಿ 'ರೆಸ್ಟು ಗಿಸ್ಟು ಎಲ್ಲಾ ಮಾಡಿಕೊಂಡು ಸರಿಯಾಗಿ ರಾತ್ರಿ ಹನ್ನೆರಡಕ್ಕೆ ಮನೀ ಹತ್ರ ಬಂದುಬಿಡೋ ಸಿದ್ದೀಕ' ಅಂತ ಮೆದುವಾಗಿ ಹೇಳಿಕಳಿಸುತ್ತಿದ್ದುದರ ಹಿಂದೆ ಸಾಹೇಬರಿಗೆ ತಮ್ಮದೇ ಸುರಕ್ಷತೆಯ ಬಗೆಗಿನ ಕಾಳಜಿ ಇದ್ದಿರಬಹುದು ಎಂಬ ಅನುಮಾನ ಇವತ್ತಿಗೂ ನಮಗಿದೆ.

ಚಿತ್ತರಂಜನ ಸಾಹೇಬರು ನಿವೃತ್ತಿಯಾಗಿ ಹಲವು ವರ್ಷಗಳೇ ಆಗಿವೆ. ಒಂದು ವಿಭಿನ್ನ ವ್ಯಕ್ತಿತ್ವವಾಗಿ ಇಷ್ಟು ವರ್ಷಗಳ ನಂತರವೂ ನಮ್ಮ ಮನಸ್ಸಿನಲ್ಲಿ ಅವರು ಪರ್ಮನೆಂಟಾಗಿ ಉಳಿದುಕೊಂಡಿದ್ದರೆ ಅದಕ್ಕೆ ಕಾರಣ ಇಲಾಖೆಯ ಘನತೆಗೆ ತಕ್ಕಂತೆ ಅವರು ನಿರ್ವಹಿಸುತ್ತಿದ್ದ ಕರ್ತವ್ಯ ಹಾಗೂ ನಮ್ಮಂತಹ ಹೊಸಬರಿಗೆ ಕೆಲಸದ ಕಡೆ ಮೂಡಿಸಿದ ಆಸಕ್ತಿ ಎಂಬುದನ್ನು ಮಾತ್ರ ಅಲ್ಲಗಳೆಯುವಂತಿಲ್ಲ.

## ತುರುವೇಕೆರೆ ರವಿಶಂಕರ್

ತಮ್ಮ ಪೊಲೀಸ್ ವೃತ್ತಿಯ ಅನುಭವಗಳ ಹಿನ್ನೆಲೆಯಲ್ಲಿ ಪ್ರಬಂಧಗಳನ್ನು ಬರೆಯುವ ರವಿಶಂಕರ್ ತುಮಕೂರು ಜಿಲ್ಲೆಯ ತುರುವೇಕೆರೆಯವರು. ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಪ್ರಸ್ತುತ ಬೆಂಗಳೂರಿನಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದಾರೆ. 'ಮಯೂರ', 'ಪ್ರಜಾವಾಣಿ', 'ಸುಧಾ'ಗಳಲ್ಲಿ ಅವರ ಪ್ರಬಂಧಗಳು ಪ್ರಕಟವಾಗಿವೆ. ಪ್ರಬಂಧ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವ ಈ ಲೇಖಕ, ಪೊಲೀಸ್ ಅಧಿಕಾರಿಯಾಗಿ ಗುಲ್ಬರ್ಗಾ, ಮಂಗಳೂರುಗಳಲ್ಲಿ ಹಾಗೂ ಎಸ್‌ಟಿಎಫ್‌ನ ವೀರಪ್ಪನ್ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ (2005) ಕಾರ್ಯನಿರ್ವಹಿಸಿದ್ದಾರೆ.